MADAM DY. SPEAKER : Now the House stands adjourned to meet again at 2.30 p.m.

(ಸಭೆಯು 1 ಗಂಟೆ 28 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ 2.30 ಕ್ಕೆ ಸೇರಲು ನಿಶ್ಚಯಿಸಿತು)

ಸದನವು 2 ಘಂಟೆ 45 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು.

(ಉಪಾಧ್ಯಕ್ಷಣಿಯವರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷಪೀಠದಲ್ಲಿ ಉಪಸ್ಥಿತರಿದ್ದರು)

ಉಪಾಧ್ಯಕ್ಷಣಿಯವರು : ಈಗ 1990ನೇ ಇಸವಿಯ ಕರ್ನಾಟಕ ಇನಾಮ್‌ಗಳು ರದ್ದಿಯಾತಿ ಕಾನೂನುಗಳ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳೋಣ.

1990ನೇ ಇಸವಿಯ ಕರ್ನಾಟಕ ಇನಾಮುಗಳು ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 1990ನೇ ಇಸವಿಯ ಕರ್ನಾಟಕ ಇನಾಮ್ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಸಿಂಪಲ್ ಅಮೆಂಡ್‌ಮೆಂಟ್ ಇದೆ. ಇದರಲ್ಲಿ ಕೇವಲ ಸಂದೂರು ಇನಾಮ್ ಅಬಾಲಿಷನ್ ಮತ್ತು ಕರ್ನಾಟಕ ಸರ್ಟನ್ ಇನಾಮ್ ಅಬಾಲಿಷನ್ ಆಕ್ಟ್ ಕೆಳಗಡೆ ಸುಮಾರು ಇನ್ನೂ 60 ಸಾವಿರ ಎಕರೆ ಜಮೀನಿನ ಬಗ್ಗೆ ಟೆನೆಂಟ್ಸ್ ಅಪ್ಲಿಕೇಷನ್ ಹಾಕಬೇಕಾಗಿತ್ತು. ಅವರು ಹಾಕಿರಲ್ಲಿಲ್ಲ. ಅದಕ್ಕಾಗಿ ಅವರಿಗೆ ಅನುಕೂಲ ಆಗಲಿ ಎಂಬ ದೃಷ್ಟಿಯಿಂದ ಈ ಸಣ್ಣ ತಿದ್ದುಪಡಿ ತಂದಿದ್ದೇವೆ. ಇದರಿಂದ ಸಾವಿರಾರು ಟೆನೆಂಟ್ಸ್‌ಗೆ ಅನುಕೂಲವಾಗುತ್ತದೆ ಇದರ ಡೇಟ್‌ನ್ನು 31 ಮಾರ್ಚ್ 1991ರ ವರೆಗೆ ಎಕ್ಸ್‌ಟೆಂಡ್ ಮಾಡಿದ್ದೇವೆ. ಅಲ್ಲಿಯವರೆಗೆ ವಿಸ್ತರಿಸಲು ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ. ಒಪ್ಪಿಗೆ ಕೊಡಲೇ ಬೇಕಾಗುತ್ತದೆ. ಇದಕ್ಕೆ ನಾವು ಒಂದು ಲಿಮಿಟೇಷನ್ಸ್ ಹಾಕಬೇಕು. ಇದೇ ಪ್ರಕಾರ ಎಕ್ಸ್‌ಟೆಂಡ್ ಮಾಡುತ್ತಾ ಹೋದರೆ ಕೆಲವು ಜನರು ಇದರ ದುರುಪಯೋಗ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇದು ಕೊನೆ ಎಕ್ಸ್‌ಟೆನ್‌ಷೆನ್ ಎಂದು ತಾವು ಹೇಳಬೇಕಾಗುತ್ತದೆ. ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಭೂ ಶಾಸನ ಕಾಯಿದೆಯ ಸೆಕ್ಷನ್ 48 (ಅ) ಪ್ರಕಾರ ಡಿಕ್ಲರೇಷನ್ ಫೈಲ್ ಮಾಡುವುದಕ್ಕೆ ಸಾಕಷ್ಟು ಟೈಮ್ ಕೊಟ್ಟಿದ್ದೀರಿ. ಇದರಿಂದ ಏನು ಬಹಳಷ್ಟು ಬಡ ರೈತರು, ನಿರಕ್ಷರಸ್ತರು ಅರ್ಜಿ ಹಾಕಲಿಲ್ಲ. ಇವತ್ತು ಎಷ್ಟೋ ಜಮೀನುಗಳು ಸರ್ಕಾರಕ್ಕೆ ಜಮಾ ಆಗಿದ್ದಾವೆ. ಹೇಳುತ್ತಿಲ್ಲ. ಯಾವ ಪ್ರಕಾರ ಅರ್ಜಿ ಹಾಕಲಿಲ್ಲ. ಇವತ್ತು ಎಷ್ಟೋ ಜಮೀನುಗಳು ಈ ಸಲುವಾಗಿ ಇವತ್ತು ನೀವು ಎಕ್ಸ್‌ಟೆನ್‌ಷನ್ ಕೊಡಬೇಕು ಎಂದು ಹೇಳುತ್ತಿಲ್ಲ. ಯಾವ ಪ್ರಕಾರ ಈ ಸಮಸ್ಯೆಯನ್ನು ಬಗೆಹರಿಸುತ್ತೀರಿ? ಏಕೆಂದರೆ ನಿಮಗೆ

ಗೊತ್ತು. ಲ್ಯಾಂಡ್ ಟ್ರಿಬ್ಯೂನಲ್ ಛೇರ್ಮನ್‌ಗೂ ಗೊತ್ತು, ಸದಸ್ಯರಿಗೂ ಗೊತ್ತು. ತಹಶೀಲ್ದಾರ್‌ರವರಿಗೂ ಗೊತ್ತಿದೆ. ವಿಲೇಜ್ ಅಕೌಂಟೆಂಟ್‌ಗೂ ಗೊತ್ತು, ಉಳುವೆ ಮಾಡುತ್ತಿದ್ದಾನೆ. ಅತನ ಪೊಸಿಷನ್‌ನಲ್ಲಿದೆ, ಪಹಣಿಯಲ್ಲಿ ಅವರ ಹೆಸರು ಎಲ್ಲಾ ಇದೆ ಗೊತ್ತು, because he has not applied within specified time, lands have been vested with the state Government.ಈ ಸಮಸ್ಯೆಗೆ ಯಾವ ಪ್ರಕಾರ ಪರಿಹಾರ ಮಾಡುತ್ತೀರಿ ಹಾಗೂ ಪರಿಶೀಲಿಸುತ್ತೀರಿ, ಎಂಬುದನ್ನು ನೋಡಬೇಕಾಗಿದೆ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಅವರು ಹೇಳುವುದರಲ್ಲಿ ಅರ್ಥ ಇದೆ. ಇದೇ ರೀತಿ ನಾವು ಎಕ್ಸ್‌ಟೆಂಡ್ ಮಾಡಿದೆವು ಅಂದರೆ ಬೋಗಸ್ ಟೆನೆನ್ಸಿಯನ್ನು ಕ್ರಿಯೇಟ್ ಮಾಡಿ ಪುನಃ ಜಮೀನನ್ನು ಪಡೆದುಕೊಳ್ಳುವಂತಹದು ಆಗಬಹುದು. ಅದಕ್ಕೆ ಅದನ್ನು ವಿಚಾರ ಮಾಡಿ ಎಲ್ಲಿ ಅವಶ್ಯಕತೆ ಇದೆ, ಅವು ಎರಡಕ್ಕೆ ಮಾತ್ರ ಎಕ್ಸ್‌ಟೆಂಡ್ ಕೇಳುತ್ತಿದ್ದೇವೆ ಸಮಗ್ರವಾಗಿ ಎಲ್ಲಾ ಕಡೆ ಕೇಳುತ್ತಿಲ್ಲ. ನಾವು ಎಲ್ಲಾ ಕಡೆ ಕೊಟ್ಟರೆ ಅದು ಮಿಸ್ ಯೂಸ್ ಆಗಬಹುದು ಎನ್ನತಕ್ಕದ್ದು, ರಿಸ್ಟ್ರಿಕ್ಷನ್ ಹಾಕಿಕೊಂಡು ಈ ಎರಡಕ್ಕೆ ಮಾತ್ರ ಸೀಮಿತವಾಗಿ ಕೇಳುತ್ತಿದ್ದೇವೆ. ತಾವು ಹೇಳಿದ ಹಾಗೆ 48 (ಎ) ಪ್ರಕಾರ ಏನು ಗೇಣಿದಾರರು ಅಪ್ಲಿಕೇಷನ್ ಹಾಕಬೇಕಾಗಿತ್ತು. ಅವರು ಕೆಲವು ಕಡೆ ಹಾಕಲಿಲ್ಲ, ಆ ಜಮೀನು ಸರ್ಕಾರದ ವಶದಲ್ಲಿದೆ ಎಂದು ಹೇಳುತ್ತಿದ್ದೀರಿ. ಅದನ್ನು ಪುನಃ ಅವರಿಗೆ ರೀ ಗ್ರಾಂಟ್ ಮಾಡಬಹುದೋ ರಿಸ್ಯೂಮ್ ಮಾಡಿಕೊಂಡು ಎಂಬುದನ್ನು ನಾನು ಪರಿಶೀಲಿಸಿ ನೇರವಾಗಿ ನಾನು ಇಂತಹವರಿಗೆ ರೀಗ್ರಾಂಟ್ ಮಾಡುವ ಬಗ್ಗೆ ಒಂದು ವಿಚಾರ ಮಾಡಬೇಕಾಗುತ್ತದೆ. ಇಲ್ಲ ಎಂದರೆ ಪುನಃ ವಿಸ್ತರಣೆ ಕೊಟ್ಟರೆ, ಒಂದೇ ಭಾಗಕ್ಕೆ ಒಂದೇ ತಾಲ್ಲೂಕಿಗೆ ಕೊಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಅದನ್ನು ಬೇರೆ ರೀತಿಯಿಂದ ವಿಚಾರ ಮಾಡೋಣ. ಈಗ ಇದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ಹಾಗೂ ಅಂಗೀಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1990ರ ಕರ್ನಾಟಕ ಇನಾಮುಗಳ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಉಪಾಧ್ಯಕ್ಷರು : "ಖಂಡ 2 ರಿಂದ 3 ವರಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : "1990ರ ಕರ್ನಾಟಕ ಇನಾಮುಗಳ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1990ರ ಕರ್ನಾಟಕ ಇನಾಮುಗಳ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನಾ (ನಿರಸನ) ವಿಧೇಯ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಹೇಳತಕ್ಕಂಥ ವಿಶೇಷಗಳು ಏನೂ ಇಲ್ಲ ಎಂದು ಭಾವಿಸುತ್ತೇನ. ಈ ವಿಚಾರವು ಎಲ್ಲಿರಿಗೂ ತಿಳಿದಿರುವುದೇ ಆಗಿರುತ್ತದೆ. ಈಗ ನಾವು ಈ ಒಂದು ಕರ್ನಾಟಕ ಹಿಡುವಳಿಗಳ ತುಂಡೀಕರಣ ವಿಧೇಯಕವನ್ನು ರಿಪೀಲ್ ಮಾಡುತ್ತಾ ಇದ್ದೇವೆ. ಇದರಿಂದ ಅನೇಕ ರೈತರುಗಳಿಗೆ ಅನುಕೂಲವಾಗುತ್ತದೆ. ಇಲ್ಲಿಯವರೆಗೆ ಅದನ್ನು ಕನ್ಸಾಲಿಡೇಟ್ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮೊದಲು ತಂದರು. ಆದರೆ ಅದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಯಿತು. ಆದುದರಿಂದ ಆ ಬಗ್ಗೆ ಅನೇಕ ಮನವಿಗಳು ಶಾಸಕರಿಂದ ಮತ್ತು ರೈತಬಾಂಧವರಿಂದ ಬಂದುವು. ಆದ್ದರಿಂದ ಅದನ್ನು ಪರಿಗಣಿಸಿ ಈ ಒಂದು ಕಾನುನನ್ನು ರಿಪೀಲ್ ಮಾಡುತ್ತಿದ್ದೇವೆ. ದಯಮಾಡಿ ಈ ಪರ್ಯಾಲೋಚನ ಪ್ರಸ್ತಾವವನ್ನು ಒಪ್ಪಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು : ಎರಡನೆ ಖಂಡವು ಈ ವಿಧೇಯಕದ ಅಂಗವಾಗಿರುತ್ತದೆ